| **Headline:** C-KYC registry launched | |
|---|---|
| **Source:** Kannada Prabha | **Date:** 6 August 2016 |

# ಏಕರೂಪದ ಕೆವೈಸಿ ನೋಂದಣಿ

ಮುಂಬೈ: ಸೆಂಟ್ರಲ್ ನೊಯುವರ್ ಕಸ್ಟಮರ್ಸ್ (ಸಿಕೆವೈಸಿ) ನೋಂದಣಿಗೆ ಚಾಲನೆ ದೊರೆತಿದ್ದು, ದೇಶಾದ್ಯಂತ ಎಲ್ಲ ಕಡೆಗಳಲ್ಲಿಯೂ ಏಕ ರೂಪದ ಕೆವೈಸಿ ಪ್ರಕ್ರಿಯೆಯನ್ನು ಅನುಸರಿಸುವ ವ್ಯವಸ್ಥೆಜಾರಿಗೆ ಬಂದಿದೆ.

ಹಣಕಾಸು ಕ್ಷೇತ್ರದಲ್ಲಿ ಕೆವೈಸಿ ದಾಖಲೆಗಳನ್ನು ಪರಸ್ಪರ ಬಳಸಿಕೊಳ್ಳಲು ಅವಕಾಶ ದೊರೆಯುವುದರಿಂದ ವಿಶೇಷವಾಗಿ ಹೂಡಿಕೆದಾರರು ಮತ್ತು ಇತರರಿಗೆ ಇದರಿಂದ ಪ್ರಯೋಜನ ದೊರೆಯಲಿದೆ. ಇದಲ್ಲದೇ ಎಲ್ಲ ಹಣಕಾಸು ಸಂಸ್ಥೆಗಳು ಮತ್ತು ಗ್ರಾಹ ಕರಿಗೂ ಹಣದ ಉಳಿತಾಯವನ್ನು ಸಿಕೆವೈಸಿ ಮಾಡಲಿದೆ. ಕೇಂದ್ರ ಸರಕಾರದ ಅಧೀನದಲ್ಲಿರುವ ಸೆಂಟ್ರಲ್ ರಿಜಿಸ್ಟ್ರಿ ಆಫ್ ಸೆಕ್ಯುರಿಟೈಸೇಷನ್ ಅಸೆಟ್‌ರೀಕನ್ಸ್ಟ್ರಕ್ಷನ್ ಆಂಡ್ ಸೆಕ್ಯೂರಿಟಿ ಇಂಟರೆಸ್ಟ್‌ಆಫ್ ಇಂಡಿಯಾ (ಸಿಇಆರ್‌ಎಸ್‌ಎಐ) ಸಂಸ್ಥೆ ಸಿಕೆವೈಸಿ ನೋಂದಣಿಯ ಉಸ್ತುವಾರಿ ವಹಿಸಿಕೊಳ್ಳಲಿದೆ. ಎನ್‌ಎಸ್‌ಇ ಸಮೂಹದ ಡಾಟ್‌ಎಕ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ಗೆ ಸಿಕೆವೈಸಿ ನಿರ್ವಹಣೆ ಮತ್ತು ಸಹಾಯ ವಾಣಿಯ ಹೊಣೆಗಾರಿಕೆಯನ್ನು ನೀಡಲಾಗಿದೆ.

ಸಿಕೆವೈಸಿಯಲ್ಲಿ ಹೂಡಿಕೆದಾರರು ತಮ್ಮ ಕೆವೈಸಿ ವಿವರಗಳು ಮತ್ತು ದಾಖಲೆಗಳನ್ನು ಯಾವುದೇ ಹಣಕಾಸು ಸಂಸ್ಥೆಗೆ ಒಂದು ಬಾರಿ ಒದಗಿಸಿದರೆ ಸಾಕು. ಅವರಿಗೆ ವಿಶಿಷ್ಟವಾದ ಕೇಂದ್ರೀಕೃತ ಕೆವೈಸಿ ಸಂಖ್ಯೆಯೊಂದನ್ನು ನೀಡಲಾಗುವುದು. ಆ ಸಂಖ್ಯೆಯನ್ನು ಗ್ರಾಹಕರು ಬ್ಯಾಂಕ್‌ಖಾತೆ, ಮ್ಯೂಚುವಲ್ ಫಂಡ್ ಹೂಡಿಕೆ, ವಿಮೆ, ಹೊಸ ಪಿಂಚಣಿ ಹೂಡಿಕೆ, ಡೀಮ್ಯಾಟ್ ಖಾತೆ, ಬ್ರೋಕಿಂಗ್ ಖಾತೆ ಇತ್ಯಾದಿಗಳಲ್ಲಿ ಬಳಸಲು ಸಾಧ್ಯವಿದೆ ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರೀಕೃತ ವ್ಯವಸ್ಥೆಗೆ ಚಾಲನೆ ದೊರೆತಿರುವುದರಿಂದ ಕೆವೈಸಿ ಮಾಹಿತಿ ಅಪ್‌ಲೋಡ್ ಆಗಿರುವ ಗ್ರಾಹಕರ ಕೆವೈಸಿ ದಾಖಲೆಗಳು ಯಾವುದೇ ಹಣಕಾಸು ಸಂಸ್ಥೆಗೆ ಲಭ್ಯವಾಗಲಿದ್ದು, ಅವರು ಅದನ್ನು ಪರಿಶೀಲಿಸಬಹುದು. ಮತ್ತೆ ಕೆವೈಸಿ ಪ್ರಕ್ರಿಯೆಯನ್ನು ಪುನರಾವರ್ತಿಸುವ ಅಗತ್ಯವಿಲ್ಲ. ಇದಲ್ಲದೇ ಈಗ ಸೆಬಿಯಡಿಇರುವ ಒಂದಕ್ಕಿಂತ ಹೆಚ್ಚು ಕೆಆರ್‌ಎ ಗಳೊಂದಿಗೆ ಹಣಕಾಸು ಸಂಸ್ಥೆಗಳು ಮತ್ತು ಮಧ್ಯವರ್ತಿಗಳು ವಹಿವಾಟು ನಡೆಸಬೇಕಾದ ಅಗತ್ಯತೆಯನ್ನು ಸಿಕೆವೈಸಿ ನೀಗಿಸಲಿದೆ.